◆ **ನೀವು ಕಂಡಂತೆ ಕಥಕಳಿ ಕಲಾಪ್ರಕಾರದ ವಿಕಾಸ ಯಾವ ಬಗೆಯದು?**

ಕಥಕಳಿ ಒಂದು ಕಾಲದಲ್ಲಿ ತೀರಾ ಅಳಿವಿನಂಚಿಗೆ ಸಂದಿತ್ತು. ಬ್ರಿಟಿಷ್‌ಪೂರ್ವದಲ್ಲಿ ನಡೆದ ವಿದೇಶೀಯರ ಆಕ್ರಮಣಕ್ಕೆ ಕಥಕಳಿಯನ್ನು ಪೊರೆಯುತ್ತಿದ್ದ ರಾಜವಂಶಗಳು ನಾಶವಾದವು. ಆ ಸಂದರ್ಭದಲ್ಲಿ ಕೊಟ್ಟಾರಕರ ತಂಬೂರಾಮನ್ ಎನ್ನುವವರು ಗ್ರಾಮೀಣ ಪ್ರದೇಶಕ್ಕೆ ತೆರಳಿ ಈ ಕಲೆಯನ್ನುಸಂರಕ್ಷಿಸಿದರು. ಆಗೆಲ್ಲ ಇದನ್ನು 'ರಾಮನಾಟಂ' ಎಂದು ಗುರುತಿಸಲಾಗುತ್ತಿತ್ತು. ಉತ್ತರ ಕೇರಳದವರಾದ ಕೋಟೆಯಂ ತಂಬೂರಾನ್ ಅವರು ಈ ಕಲಾಪ್ರಕಾರಕ್ಕೆ ಕಾಯಕಲ್ಪ ನೀಡಿದ್ದರಿಂದ ಈ 'ರಾಮನಾಟಂ' ಕಲೆಯು ನಂತರದಲ್ಲಿ ಕಥಕಳಿ ಎಂದು ಗುರುತಿಸಿಕೊಂಡಿತು. ನಂತರ ಅನೇಕ ವಿದ್ವಾಂಸರು, ಕಲಾವಿದರು ಈ ಕಲೆಯ ವಿಕಾಸಕ್ಕೆ ಶ್ರಮಿಸಿದರು. ಕೇರಳದ ಕಾಳಿದಾಸ ಎಂದೇ ಪ್ರಸಿದ್ಧರಾದ ಉನ್ನಿವಾರಿಯರ್ , ಮತ್ತೋರ್ವ ವಿದ್ವಾಂಸ ಇರಿಯೆಂಬನ್ ತಂಬಿ ಮುಂತಾದವರು ಕಥಕಳಿಗೆ ಪೂರಕವಾದ ಸಾಹಿತ್ಯ (ಅದನ್ನು 'ಅಟ್ಟಕಥಾ' ಎನ್ನುವರು) ಬರೆದರು. ರಾಮಯಾಣದ ಕಥೆಗಳಿಗೆ ಸೀಮಿತವಾಗಿದ್ದ 'ರಾಮನಾಟಂ', ನಂತರದಲ್ಲಿ ಕಥಕಳಿ ಆಗಿ ರೂಪುಪಡೆಯುವಾಗ ಮಹಾಭಾರತದ ಕಥೆಗಳನ್ನೂ ಸೇರಿಸಿಕೊಂಡುದರಿಂದ ಈ ಕಲಾಪ್ರಕಾರ ವಿಸ್ತೃತವಾಯಿತು. ಸುಮಾರು ನಾಲ್ಕುನೂರಕ್ಕೂ ಹೆಚ್ಚು ಅಟ್ಟಕಥಾಗಳು ಮಣಿಪ್ರವಾಳ (ಸಂಸ್ಕೃತ ಮತ್ತು ಮಲಯಾಳಂನ ಮಿಶ್ರಣದಂತಿರುವ ಭಾಷೆ) ಭಾಷೆಯಲ್ಲಿವೆಯಾದರೂ, ಪ್ರಸ್ತುತ ಸುಮಾರು 40 ಕಥಾಗಳನ್ನು ಮಾತ್ರ ಪ್ರದರ್ಶಿಸಲಾಗುತ್ತಿದೆ. ಜನಪ್ರಿಯ ಕಥೆಗಳಿಗೆ ಮಾರುಹೋಗಿ, ಹೊಸತನವನ್ನು ಹುಡುಕುವುದು ಕಡಿಮೆಯಾಗುತ್ತಿದ್ದಂತೆಯೇ ಪುರಾತನ ಅಟ್ಟಕಥಾಗಳು ವಾಡಿಕೆಯಿಂದ ಮರೆಯಾಗುತ್ತಿವೆ. ಹಿಂದೆಲ್ಲ ಕಥಕಳಿಯೇ ಇಡೀ ರಾತ್ರಿ ಪ್ರದರ್ಶನವಾಗುತ್ತಿತ್ತು. ಅದೀಗ ಹ್ರಸ್ವವಾಗಿ, ಕೇಳಿ, ಪೊರಪ್ಪಾಟ್, ಮೇಳಪದಂ ಎಲ್ಲವೂ ಕಡಿಮೆಯಾಗುತ್ತ, ಕೇವಲ ಒಂದೆರಡು ಗಂಟೆಗಳಿಗೆ ಸೀಮಿತವಾದ ಪ್ರಸಂಗಗಳನ್ನಷ್ಟೇ ಪ್ರದರ್ಶಿಸಲಾಗುತ್ತಿದೆ.

◆ **ಗಾಂಧಿ ಸೇವಾಸದನದಲ್ಲಿ ನೀವು ಕಥಕಳಿ ಕಲಿತ ನೆನಪುಗಳನ್ನು ಹಂಚಿಕೊಳ್ಳಿ.**

ಅಲ್ಲಿ ಬೆಳಿಗ್ಗೆ ಮೂರು ಗಂಟೆಗೆ ತರಬೇತಿ ಆರಂಭವಾಗುತ್ತಿತ್ತು. ಮೊದಲ ಅವಧಿ ವ್ಯಾಯಾಮ. ಸಮಗ್ರ ಅಂಗಪ್ರತ್ಯಂಗೋಪಾಂಗ ತರಬೇತಿಯದು. ನಂತರ 5 ಗಂಟೆಗೆ ತರಬೇತಿಗಳಿರುತ್ತಿದ್ದವು. ಒಂಬತ್ತು ಗಂಟೆಗೆ ಪಾತ್ರಗಳನ್ನು ಅಭ್ಯಸಿಸುವ ತರಗತಿ ಆರಂಭವಾಗುತ್ತಿತ್ತು. ಮಧ್ಯಾಹ್ನ 2.30ಕ್ಕೆ ದೇಹ-ಕೈಚಲನೆಗಳನ್ನು ಕಲಿಯುವುದು, ಹಿಮ್ಮೇಳದೊಡನೆ ಅಭ್ಯಾಸ ನಡೆಯುತ್ತಿತ್ತು. ರಾತ್ರಿ 7ರಿಂದ 8.30ರವರೆಗೆ ಕಥೆಗಳನ್ನು ಕೇಳುವುದು, ತರ್ಕ, ಸಂವಾದ, ಭಾವನಾತ್ಮಕವಾದ ವಿಚಾರಗಳನ್ನು ಗ್ರಹಿಸುವುದು... ಹೀಗೆ ಬೆಳಿಗ್ಗೆ 3 ಗಂಟೆಯಿಂದ ರಾತ್ರಿ 9ರವರೆಗೆ ನಮ್ಮ ಕಲಿಕೆ ಸಾಗುತ್ತಿತ್ತು.

ಕಥಕಳಿಯಲ್ಲಿ ನೂರಾರು ಪ್ರಸಂಗಗಳಿದ್ದರೂ, ಕೋಟೆಯಮ್ ತಂಬುರಾನ್ ಅವರು ಬರೆದ ನಾಲ್ಕು ಬೃಹತ್ ಪ್ರಸಂಗಗಳನ್ನು ಚೆನ್ನಾಗಿ ಅಭ್ಯಿಸಿದರೆ ಬೇರೆ ಯಾವುದೇ ಪಾತ್ರಗಳನ್ನು ಸುಲಲಿತವಾಗಿ ಮಾಡಬಹುದು ಎಂಬ ನಂಬಿಕೆಯಿದೆ. 'ಭಾಗವತಂ' ಎಂಬ ಮೊದಲ ಭಾಗ (ಅರಗಿನಮನೆ, ಬಕವಧೆವರೆಗಿನ ಕಥೆ), 'ಕಿರ್ಮೀರ ವಧೆ' ಎಂಬ ಎರಡನೇ ಭಾಗ, 'ಕಲ್ಯಾಣ ಸೌಗಂಧಿಕಾ ಪುಷ್ಪ - ಅಜ್ಞಾತ ವಾಸ' ಎಂಬ ಮೂರನೇ ಭಾಗ ಹಾಗೂ 'ನಿವಾತಕವಚ, ಕಾಲಕೇಯ ವಧೆ' ಎಂಬ ನಾಲ್ಕನೇ ಭಾಗ - ಹೀಗೆ ದೀರ್ಘವಾದ ಈ ನಾಲ್ಕು ಪ್ರಸಂಗಗಳನ್ನು ಕೋಟೆಯಂ ತಂಬುರಾನ್ ಅವರು ತಮ್ಮ ಗುರುಗಳ ಆದೇಶದ ಮೇರೆ ಬರೆದರಂತೆ. ಮೂರೂ ಪ್ರಸಂಗಗಳಲ್ಲಿ ಒಂದೊಂದು ಅಸಮಾಧಾನವನ್ನು ವ್ಯಕ್ತಪಡಿಸಿದ ಗುರುಗಳು ನಾಲ್ಕನೆಯ ಭಾಗವು ತಕ್ಕಮಟ್ಟಿಗಿದೆ ಎಂದರಂತೆ. ಆದರೆ ಈ ನಾಲ್ಕು ಅಟ್ಟಕಥಾಗಳು ನಿಜಕ್ಕೂ ಕಥಕಳಿಯ ತಳಪಾಯದಂತೆ ವಿಸ್ತೃತವಾಗಿವೆ.

◆ **ನೀವು ಕಲ್ಲುವಳಿ ಶೈಲಿಯನ್ನು ಅನುಸರಿಸುತ್ತೀರಿ. ಕಥಕಳಿಯಲ್ಲಿ ಪ್ರಸ್ತುತ ಬೇರೆ ಯಾವ ಶೈಲಿ ಚಾಲ್ತಿಯಲ್ಲಿದೆ?**

ಕಥಕಳಿಯಲ್ಲಿ ಪ್ರಸ್ತುತ ಜನಪ್ರಿಯವಾಗಿರುವುದು ಕಲ್ಲುವಳಿ ಶೈಲಿಯೇ. ಹಿರಿಯ ಕಲಾವಿದ ಕುಯಿಲ್ಲೋಡಿ ಇಟ್ಟಿರಾರಿಚ್ಚ ಮನೆನ್ ಅವರು ಕಲ್ಲಡಿಕ್ಕೋಡನ್